International Journal of Kannada Research 2021; 7(4): 175-177




International Journal of Kannada Research
www.kannadajournal.com

**ISSN: 2454–5813**
IJKR 2021; 7(4): 175-177
© 2021 IJKR
www.kannadajournal.com
Received: 10-08-2021
Accepted: 12-09-2021

**Dr. Savitha B**
Assistant Professor, P.G.Studies and Research in Kannada, Govt. College, Kasaragod, Kerala, India

**Corresponding Author:**
**Dr. Savitha B**
Assistant Professor, P.G.Studies and Research in Kannada, Govt. College, Kasaragod, Kerala, India

# ವೈದೇಹಿಯವರ ಕಥೆಗಳಲ್ಲಿ ಸಾಂಸ್ಕೃತಿಕ ನೆಲೆಯ ಪಲ್ಲಟ

**Dr. Savitha B**

ಒಂದು ಕುಟುಂಬದಲ್ಲಿ, ಕುಟುಂಬದಲ್ಲಿ ಕೇಂದ್ರ ಪಾತ್ರವಹಿಸುವ ಹೆಣ್ಣಿನ ವ್ಯಕ್ತಿತ್ವದಲ್ಲಿ, ಪ್ರಜ್ಞೆಯಲ್ಲಿ ಸಮಾಜದ ಹೊರಗಿನ ಅನೇಕ ವಸ್ತುಗಳು, ಚಿಂತನೆಗಳು, ವ್ಯಕ್ತಿಗಳು, ಸಂಸ್ಥೆಗಳು ಪ್ರಭಾವ ಬೀರುತ್ತಲೇ ಇರುತ್ತವೆ. ಇವುಗಳೆಲ್ಲ ಸಾಮಾಜಿಕ ಪ್ರಜ್ಞೆಯನ್ನು ಜಾಗೃತಗೊಳಿಸಿರುವುದಲ್ಲದೆ ಅದರ ಒಂದು ಭಾಗವಾದ ಸ್ತ್ರೀ ಪ್ರಜ್ಞೆಯಲ್ಲಿಯೂ ಗಮನಾರ್ಹ ಪಲ್ಲಟಗಳನ್ನು ಸಾಧ್ಯವಾಗಿಸಿದೆ. ಒಂದು ಕುಟುಂಬದ ಸದಸ್ಯರ ಆಲೋಚನಾಕ್ರಮ, ಜೀವನಕ್ರಮಗಳ ವ್ಯತ್ಯಾಸಕ್ಕೆ ಹೊರಗಿನಿಂದ ಆಗಮಿಸಿದ ಯಾವುದೇ ವಸ್ತು, ವ್ಯಕ್ತಿ ಚಿಂತನೆಗಳು ಯಾವ ರೀತಿಯಲ್ಲಿ ಕಾರಣಗಳಾಗುತ್ತವೆ ಎನ್ನುವಂತಹ ಆಶಯಗಳನ್ನಿಟ್ಟುಕೊಂಡು ಕನ್ನಡದಲ್ಲಿ ಹಲವಾರು ಕಥೆಗಳು ರಚನೆಯಾಗಿವೆ. ವೈದೇಹಿಯವರ 'ಮನೆಯವರೆಗಿನ ಹಾದಿ, 'ಗುಲಾಬಿ ಟಾಕೀಸು ಮತ್ತು ಅಲೆಗಳು' ಈ ಸಾಲಿಗೆ ಸೇರುವ ಕಥೆಗಳು. ಈ ಕಥೆಗಳಲ್ಲಿ ವೈದೇಹಿಯವರು ಒಂದು ಸ್ಥಗಿತ ಸಮಾಜವನ್ನು, ಅಲ್ಲಿನ ಸಾಂಸ್ಕೃತಿಕ ಜೀವನವನ್ನು ವಿವರಿಸುತ್ತಾ ಕೆಲವು ವಸ್ತು, ವಿಚಾರಗಳ ಆಗಮನದೊಂದಿಗೆ ನಿಧಾನವಾಗಿ ಚಲನೆ ಪಡೆದುಕೊಳ್ಳುತ್ತಿರುವ ಒಂದು ಸಾಂಸ್ಕೃತಿಕ ಜೀವನದ ಚಿತ್ರಣವನ್ನು ಕಟ್ಟಿಕೊಡುತ್ತಾರೆ. 'ಗುಲಾಬಿ ಟಾಕೀಸು ಮತ್ತು ಅಲೆಗಳು' ಕಥೆಯಲ್ಲಿ ಒಂದು ಟಾಕೀಸು ಸ್ಥಗಿತ ಸಮಾಜದ ಪಲ್ಲಟಕ್ಕೆ ಕಾರಣವಾದರೆ, 'ಮನೆಯವರೆಗಿನ ಹಾದಿ' ಕಥೆಯಲ್ಲಿ ಮನೆಯವರೆಗೆ ನಿರ್ಮಾಣಮಾಡಿದ ಒಂದು ರಸ್ತೆ ಆ ಮನೆಯವರ ಜೀವನಕ್ರಮದಲ್ಲಿ ನಡೆಯುವ ಅನೇಕ ಬದಲಾವಣೆಗೆ ಕಾರಣವಾಗುತ್ತದೆ. ವೈದೇಹಿಯವರ ಕಥೆಗಳಲ್ಲಿ ಮುಖ್ಯವಾಗಿ 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ', 'ಆರತಿ ತಟ್ಟೆ', 'ಮನೆಯವರೆಗಿನ ಹಾದಿ', 'ಗುಲಾಬಿ ಟಾಕೀಸು ಮತ್ತು ಅಲೆಗಳು' ಈ ಕಥೆಗಳು ಸಾಂಸ್ಕೃತಿಕ ಜೀವನದ ಪಲ್ಲಟಗಳನ್ನು ಸೂಚಿಸುವ ಕಥೆಗಳಾಗಿದ್ದರೂ ಈ ಲೇಖನದಲ್ಲಿ 'ಮನೆಯವರೆಗಿನ ಹಾದಿ' ಹಾಗೂ ಗುಲಾಬಿ ಟಾಕೀಸು ಮತ್ತು ಅಲೆಗಳು' ಈ ಕಥೆಗಳನ್ನು ಮಾತ್ರ ವಿಶ್ಲೇಷಣೆ ಮಾಡಲಾಗಿದೆ. ಈ ಎರಡು ಕಥೆಗಳಲ್ಲಿ ಮುಖ್ಯವಾಗಿ ನವ ಆಧುನಿಕತೆಯು ಒಂದು ಸಂಸ್ಕೃತಿಯ ಒಳಗೆ ಪ್ರವೇಶ ಮಾಡುತ್ತಿರುವುದರ ಚಿತ್ರಣ ವ್ಯಕ್ತವಾಗುತ್ತದೆ.

ಜಾಗತೀಕರಣದ ಫಲವಾಗಿ ಸ್ಥಳೀಯ ಜೀವನಕ್ರಮವನ್ನು ಹೊರಗಿನ ವಸ್ತು, ವಿಚಾರ, ವ್ಯಕ್ತಿ, ಸಂಸ್ಥೆ, ಮೌಲ್ಯಗಳು ಪ್ರವೇಶಿಸಿದಾಗ ಉಂಟಾಗುವ ಪಲ್ಲಟಗಳ ಕಥನಗಳನ್ನು 'ಆಗಮನದ ಕಥನಗಳು' ಎಂದು 'ವೈದೇಹಿ ಕಥನ' ಕೃತಿಯಲ್ಲಿ ಟಿ.ಪಿ.ಅಶೋಕರವರು ಗುರುತಿಸುತ್ತಾರೆ. ಇದರ ಪರಿಣಾಮವೆನ್ನುವಂತೆ ಆಧುನೀಕರಣ, ನಗರೀಕರಣಗಳು ರೂಪುಗೊಳ್ಳುತ್ತವೆ. ಈ ಕಾರಣದಿಂದ ಶಿಕ್ಷಣ, ಉದ್ಯೋಗಗಳಿಗಾಗಿ ಊರು–ಮನೆಗಳಿಂದ ಜನರು ನಿರ್ಗಮಿಸಿದಾಗ ಉಂಟಾಗುವ ಪರಿಸ್ಥಿತಿಯನ್ನು ಕಥಿಸುವ ಕೃತಿಗಳನ್ನು ನಿರ್ಗಮನದ ಕಥನಗಳು' ಎಂದೂ, ಊರು, ಮನೆಗಳಿಂದ ಕೆಲಕಾಲ ಹೊರಗಿದ್ದು ಹೊಸ ಶಿಕ್ಷಣ, ಮೌಲ್ಯ, ಅನುಭವಗಳಿಂದ ಮತ್ತೆ ಊರು, ಮನೆಗಳಿಗೆ ಹಿಂದಿರುಗಿ ಹೊಸಜೀವನವನ್ನು ಪ್ರಾರಂಭಿಸುವವರ ಕಥೆಗಳನ್ನು 'ಪುನರಾಗಮನದ ಕಥನಗಳು' ಎಂದು ಗುರುತಿಸುತ್ತಾರೆ. ತೇಜಸ್ವಿಯವರ 'ಅಬಚೂರಿನ ಪೋಸ್ಟಾಫೀಸು', ದೇವನೂರು ಮಹಾದೇವರ 'ಡಾಂಬರು ಬಂದುದು', ವೈದೇಹಿಯವರ ಮನೆಯವರೆಗಿನ ಹಾದಿ, ಗುಲಾಬಿ ಟಾಕೀಸು ಮತ್ತು ಅಲೆಗಳು' ಕಥೆಗಳು ಆಗಮನದ ಕಥನಗಳಿಗೆ ಉತ್ತಮ ಉದಾಹರಣೆಗಳಾಗಿವೆ. ಇಲ್ಲಿ ವೈದೇಹಿ ಕಥೆಗಳ ವಿಶೇಷವೆಂದರೆ ಹೊಸತಿನ ಆಗಮನದ ಪರಿಣಾಮಗಳನ್ನು ಮಹಿಳೆಯರ ದೃಷ್ಟಿಯಿಂದ ದಾಖಲಿಸಿರುವುದು.

ವೈದೇಹಿಯವರು ೧೯೯೧ ರಲ್ಲಿ ಬರೆದು ಪ್ರಕಟಗೊಳಿಸಿರುವ 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ' ಸಂಕಲನದಲ್ಲಿ ಬರುವ ಪ್ರಮುಖ ಕಥೆ 'ಗುಲಾಬಿ ಟಾಕೀಸು ಮತ್ತು ಅಲೆಗಳು'. ಈ ಕಥೆಯು ಸಮಾಜದಲ್ಲಿ ನಡೆದ ಸಾಂಸ್ಕೃತಿಕ ಪಲ್ಲಟಗಳನ್ನು ಚಿತ್ರೀಕರಿಸುವ ಮೂಲಕ ಸ್ವಾಭಿಮಾನದ ಬದುಕಿಗೆ ತೆರೆದುಕೊಳ್ಳುತ್ತಿರುವ ಸ್ತ್ರೀಯರ ಬದುಕನ್ನು ಅನಾವರಣಗೊಳಿಸುತ್ತದೆ.

ಜಾಗತೀಕರಣದ ಪರಿಣಾಮವಾಗಿ ಇಡೀ ಜಗತ್ತೇ ಬದಲಾವಣೆ ಹೊಂದುತ್ತಿರುವ ಪ್ರಸ್ತುತ ಸನ್ನಿವೇಶಗಳಲ್ಲಿ ಹಳ್ಳಿ ಪ್ರದೇಶದಲ್ಲಿ ಒಂದು ಸಿನೇಮಾ ಟಾಕೀಸ್ ತಂದುಕೊಟ್ಟ ಪಲ್ಲಟಗಳನ್ನು ಕಥೆಯು ವಿವರಿಸುತ್ತದೆ. ಊರಿನ ಸ್ತ್ರೀ ಲೋಕ ಮತ್ತು ಪುರುಷ ಲೋಕಗಳು ಭಿನ್ನವಾಗಿದ್ದು, ಸ್ತ್ರೀಲೋಕವು ಮನೆಯ ಹೊಸ್ತಿಲನ್ನು ದಾಟುವ ಅವಕಾಶವಿಲ್ಲದ ಕಾಲಘಟ್ಟದಲ್ಲಿ ಕಥೆ ತೆರೆದುಕೊಳ್ಳುತ್ತದೆ. ಟಾಕೀಸಿನ ಗೇಟ್ ಕೀಪರ್ ಲಿಲ್ಲಿಬಾಯಿಯನ್ನು ಕೇಂದ್ರವಾಗಿಟ್ಟು ಆಕೆಯ ಸುತ್ತುಮುತ್ತ ನಡೆಯುವ ಬದಲಾವಣೆಗಳೇ ಕಥೆಯ ಕೇಂದ್ರ ಆಶಯವಾಗಿದೆ. ಊರಿನ ಸ್ಥಗಿತ ಸಮಾಜಕ್ಕೆ ಚಾಲನೆ ಲಭಿಸುವುದು ದೂರದ ಮಹಾನಗರದಲ್ಲಿ ಆರ್ಥಿಕವಾಗಿ ಸಬಲೆಯಾಗಿರುವ ಗುಲಾಬಿಯಿಂದ. ಗುಲಾಬಿ ಸಂಪಾದಿಸಿದ ಹಣದಿಂದ ಊರಿನಲ್ಲಿ ಟಾಕೀಸಿನ ಪ್ರವೇಶವಾದಾಗ ಇಬ್ಬಗೆಯ ಪರಿಣಾಮಗಳು ಉಂಟಾಗುತ್ತವೆ. ಮನೆಯ ಹೊಸ್ತಿಲು ದಾಟದ ಸ್ತ್ರೀಯರಿಗೆ ಸಾರ್ವಜನಿಕ ಸಮಾಜದ ಜೊತೆಗೆ ಸಂಪರ್ಕ ಸಾಧ್ಯವಾಗುತ್ತದೆ. ಇನ್ನೊಂದೆಡೆಗೆ ಕಥೆಯ ಕೇಂದ್ರಪಾತ್ರ ಲಿಲ್ಲಿಬಾಯಿ, ಟಾಕೀಸಿನ ಗೇಟ್ ಕೀಪರ್ ಆಗಿ ನೇಮಕವಾಗಿ ಆಕೆಯ ಆರ್ಥಿಕ ಸ್ಥಿತಿಯಲ್ಲಿ ನಡೆಯುವ ಪ್ರಗತಿಯನ್ನು ಕಥೆ ದಾಖಲಿಸುತ್ತದೆ. ಪರಾವಲಂಬಿಗಳಾಗಿ ತಮ್ಮೆಲ್ಲ ಅಗತ್ಯಗಳಿಗೆ ಮನೆಯ ಗಂಡಸರ ಮುಂದೆ ಕೈಯೊಡ್ಡುವ ಶ್ರೀಮಂತ ಕುಟುಂಬದ ಮಹಿಳೆಯರು ಲಿಲ್ಲಿಬಾಯಿಯಿಂದಾಗಿ ಅವಮಾನವನ್ನು ಹೊಂದಿದಾಗ 'ಮನೆಯಲ್ಲಿ ಎಷ್ಟಿದ್ದರೇನು ಕೈಯಲ್ಲಿ ನಾಲ್ಕು ಕಾಸು ಇಲ್ಲದಿರುವಾಗ' ಎಂದು ತಮ್ಮ ಆರ್ಥಿಕ ಪರಾವಲಂಬನೆಯ ಸ್ಥಿತಿಯನ್ನು ಆಲೋಚಿಸುವಂತೆ ಮಾಡುವಲ್ಲಿಯೂ ಟಾಕೀಸು ಸಫಲವಾಗುತ್ತದೆ. ಕಥೆಯ ಕೊನೆಯಲ್ಲಿ ತಮ್ಮ ಸೀಮಿತ ಚೌಕಟ್ಟಿನ ಒಳಗಡೆಯೇ ಆದರೂ ಸ್ವಂತದ ನಿರ್ಧಾರಗಳನ್ನು ಕೈಗೊಳ್ಳಲು ಮಹಿಳೆಯರು ಶಕ್ತರಾಗುತ್ತಾರೆ. ಸಮಾಜದ ಕೆಳವರ್ಗದವರ ಜೀವನಕ್ರಮದಲ್ಲಿಯೂ ಟಾಕೀಸು ಪಲ್ಲಟಕ್ಕೆ ಕಾರಣವಾಗುತ್ತದೆ. ಹೊರಲೋಕವನ್ನು ಕಂಡಿಲ್ಲದ ಕೊರಗ ಸಮುದಾಯದ ಮಹಿಳೆಯರು ಟಾಕೀಸಿನ ಪ್ರವೇಶದೊಂದಿಗೆ ಒಂದಷ್ಟು ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ.

ಹೆಂಗಸರ ಮನೋಲೋಕದಲ್ಲಿ ಎಬ್ಬಿಸಿದ ಅಲೆಗಳನ್ನು, ಈ ಮೂಲಕ ಕುಟುಂಬದ ಒಟ್ಟು ರಚನೆಯಲ್ಲಿ ಆದ ಬದಲಾವಣೆಗಳನ್ನು ಕಥೆ ದಾಖಲಿಸುತ್ತದೆ. ಇಲ್ಲಿನ ಹೆಣ್ಣುಮಕ್ಕಳಿಗೆ ಅಪಾರ ಸಾಧ್ಯತೆಗಳಿವೆ. ಆದರೆ ಸಾಂಸ್ಕೃತಿಕ ಕಾರಣಗಳಿಂದಾಗಿ (ಹಲವು ನೆಲೆಯ ನಿಯಂತ್ರಣಗಳಿಂದಾಗಿ) ಮೂಕರಾಗಿದ್ದಾರೆ. ತಮ್ಮ ವಿಕಾಸಕ್ಕೆ ಸಮಯ ಸಂದರ್ಭಗಳು, ಪೂರಕ ವಾತಾವರಣ ಲಭಿಸಿದಾಗ ತಮ್ಮ ಅನನ್ಯತೆಗಳನ್ನು ಕಂಡುಕೊಂಡಿದ್ದಾರೆ. ಲಿಲ್ಲಿಬಾಯಿಯನ್ನು ಒಳಗೊಂಡಂತೆ, ಇಡೀ ಸಮಾಜದ ಮಹಿಳೆಯರ ಜೀವನದಲ್ಲಿ ಬದಲಾವಣೆಗಳು ನಡೆಯುವ ಕಾರಣ ಸಾಂಸ್ಕೃತಿಕವಾಗಿ ಅಲ್ಲಿನ ಬದಲಾವಣೆಗಳು ಮಹತ್ವವನ್ನು ಪಡೆದುಕೊಳ್ಳುತ್ತವೆ. ಇಡೀ ಊರಿನ ಸಾಂಸ್ಕೃತಿಕ ಸ್ಥಿತ್ಯಂತರವನ್ನು ಕಥೆ ದಾಖಲಿಸುತ್ತದೆ.

ವೈದೇಹಿಯವರು ೨೦೦೪ ರಲ್ಲಿ ಬರೆದು ಪ್ರಕಟಿಸಿರುವ 'ಕ್ರೌಂಚ ಪಕ್ಷಿಗಳು' ಸಂಕಲನದಲ್ಲಿ ಬರುವ 'ಮನೆಯವರೆಗಿನ ಹಾದಿ' ಇನ್ನೊಂದು ಪ್ರಮುಖ ಕಥೆ. ವಿಜಯಾನ್ವೇಷಣ ಕೃತಿಯಲ್ಲಿ, ಆಧುನೀಕರಣ ಮತ್ತು ಮಹಿಳೆ ಎನ್ನುವ ಲೇಖನದಲ್ಲಿ ಅರವಿಂದ ಚೊಕ್ಕಾಡಿಯವರು ಆಧುನೀಕರಣದ ಬಗೆಗೆ ಹೇಳುವ ಮಾತುಗಳು 'ಮನೆಯವರೆಗಿನ ಹಾದಿ' ಕಥೆಯ ಸಂದರ್ಭದಲ್ಲಿ ಮುಖ್ಯವೆನಿಸುತ್ತದೆ. ಅವರು ಅಭಿಪ್ರಾಯ ಪಡುವಂತೆ "ಆಧುನೀಕರಣವು ಅನಿವಾರ್ಯ ಪ್ರಕ್ರಿಯೆ. ಯಾವತ್ತೂ ನಾಗರಿಕತೆ ಬೆಳೆದುದೇ ಆಧುನೀಕರಣ ಪ್ರಕ್ರಿಯೆಯಿಂದ. ಆಧುನೀಕರಣಕ್ಕೆ ಚಾಲನೆ ದೊರೆತುದು ಯೂರೋಪಿನ ಕೈಗಾರಿಕ ಕ್ರಾಂತಿಯ ತರುವಾಯ. ಈ ಆವಿಷ್ಕಾರವು ಒಂದು ವಿಷಯಕ್ಕೆ ಸಂಬಂಧಿಸಿದ್ದಲ್ಲ. ವ್ಯಾಪಕ ಹೊಸತನದ ಹುಡುಕಾಟವಾಗಿತ್ತದು. ಇಂದಿನ ನಮ್ಮ ಮುಖ್ಯ ಪರಿಕಲ್ಪನೆಗಳಾದ ಸಮಾನತೆ, ಸ್ವಾತಂತ್ರ್ಯ, ಸೆಕ್ಯೂಲರ್ ದೃಷ್ಟಿ, ಮಾನವೀಯತೆ, ಸ್ತ್ರೀವಾದ, ಮಹಿಳಾ ಸಂವೇದನೆ ಮುಂತಾದವೆಲ್ಲ ಆಧುನೀಕರಣದ ಕೊಡುಗೆಯಾಗಿ ರೂಪುತಳೆದ ಪರಿಕಲ್ಪನೆಗಳು. ಅದರಲ್ಲಿ ಸೃಜನಶೀಲತೆಯು, ಒಂದು ಉದ್ದೇಶವಾಗಿ ನಡೆಯುವ ಆವಿಷ್ಕಾರದಿಂದ ಹಲವಾರು ಬೈ ಪ್ರೊಡಕ್ಟ್‌ಗಳನ್ನು ಸೃಷ್ಟಿಸಲು ಸಮರ್ಥವಾಗಿದೆ. ಸೌಖ್ಯದ ಸಾಧ್ಯತೆಗಳನ್ನು ಹೆಚ್ಚಿಸಿದೆ. ಅಲ್ಲದೆ ಆಧುನೀಕರಣ ಎನ್ನುವುದು ಸಮಗ್ರ ಸಮಾಜದಲ್ಲಿ ಒಂದು ಮನೋಧರ್ಮವನ್ನು ರೂಪಿಸುವಂತದ್ದು. ಅದರಿಂದಲೂ ಕಳೆದುಕೊಳ್ಳುವಂತದ್ದು ಇಲ್ಲವೆಂದಲ್ಲ. ಆದರೆ ಇನ್ನೊಂದನ್ನು ಪಡೆದುಕೊಳ್ಳುವುದಕ್ಕಾಗಿ ಹಿಂದಿನದ್ದನ್ನು ಕಳೆದು ಕೊಳ್ಳುತ್ತೇವೆ. ಇದು ಅನಿವಾರ್ಯ". ಅರವಿಂದ ಚೊಕ್ಕಾಡಿಯವರ ಈ ಮೇಲಿನ ಮಾತುಗಳು ಕಥೆಯೊಳಗಿನ ಸನ್ನಿವೇಶವನ್ನು ಪುರಸ್ಕರಿಸುವಂತದ್ದೇ ಆಗಿದೆ. ಕಥೆಯಲ್ಲಿ, ಮನೆಯವರೆಗೆ ನಿರ್ಮಾಣವಾದ ರಸ್ತೆಯ ಕಾರಣದಿಂದಾಗಿ ಆಧುನಿಕತೆಯು ಹಳ್ಳಿಯೂರಿಗೆ ಪ್ರವೇಶ ಪಡೆಯುವ ಮೂಲಕ ಗಮನಾರ್ಹ ಬದಲಾವಣೆಗಳು ಸಂಭವಿಸಿದರೂ ಹಳ್ಳಿಯ ಬದುಕಿನ ಜೀವಸತ್ವವನ್ನು ತಮ್ಮ ನರನಾಡಿಗಳಲ್ಲಿ ತುಂಬಿಕೊಂಡಿದ್ದ ಕೆಲವು ಪಾತ್ರಗಳು, ಕಳೆದುಹೋಗುತ್ತಿರುವ ಪರಂಪರೆಯ ವಿಚಾರಗಳಿಗೆ ಮೂಕ ಸಾಕ್ಷಿಗಳಾಗಿ ಬಿಡುವ ದುರಂತ ಕಾಣಿಸಿಕೊಳ್ಳುತ್ತದೆ.

'ಮನೆಯವರೆಗಿನ ಹಾದಿ' ಕಥೆಯಲ್ಲಿ ಮುಖ್ಯ ಚರ್ಚೆಗೊಳಗಾಗುವ ವಿಷಯವೆಂದರೆ, ಸಾಂಪ್ರದಾಯಿಕ ಸ್ಥಿತಿಯಲ್ಲಿದ್ದಂತಹ ಒಂದು ಹಳ್ಳಿಯ ಸಣ್ಣ ಮನೆ, ಆ ಮನೆಯವರೆಗೆ ಮಾಡಿದ ಒಂದು ರಸ್ತೆಯ ಮೂಲಕ ಆಧುನೀಕತೆ ಪ್ರವೇಶ ಪಡೆದಾಗ ಅಲ್ಲಿ ಯಾವ ರೀತಿಯ ಬದಲಾವಣೆಗಳು ಆದುವು, ಅದರ ಒಳಿತು ಕೆಡುಕುಗಳೇನು? ಆಧುನೀಕರಣ ಪ್ರಕ್ರಿಯೆಯ ಪ್ರಯೋಜನವನ್ನು ಕೆಲವು ವ್ಯಕ್ತಿಗಳು ಸ್ವಾರ್ಥಕ್ಕಾಗಿ ಬಳಸಿಕೊಂಡಾಗ ಕುಟುಂಬದ ನಿಲುವುಗಳು ಹೇಗೆ ಶಿಥಿಲವಾಗುತ್ತಾ ಹೋಗುತ್ತವೆ ಎನ್ನುವುದು ಕಥೆಯಲ್ಲಿ ಮುಖ್ಯವೆನಿಸುತ್ತದೆ. ಮನೆಯವರೆಗೆ ನಿರ್ಮಾಣ ಮಾಡಿದ ರಸ್ತೆಯು ಆ ಮನೆಯವರ ಒಟ್ಟು ಬದುಕಿನಲ್ಲಿ ಉಂಟುಮಾಡಿದ ಸೂಕ್ಷ್ಮಪಲ್ಲಟಗಳನ್ನು ಕಥೆ ಅನಾವರಣಗೊಳಿಸುವುದರ ಮೂಲಕ ಆಧುನಿಕತೆಯ ಪ್ರವೇಶದ ಪರಿಣಾಮವಾಗಿ ಉಂಟಾದ ಒಳಿತು ಕೆಡುಕುಗಳ ಕಡೆಗೆ ದೃಷ್ಟಿ ಹರಿಸುವಂತೆ ಮಾಡುತ್ತದೆ. ಮಾತ್ರವಲ್ಲದೆ ಮನೆಯ ಮಹಿಳೆಯರ ಜೀವನಕ್ರಮದ ಮೇಲೂ ಆಧುನಿಕತೆಯ ಪ್ರಭಾವ ಆವರಿಸಿಕೊಳ್ಳುತ್ತಿರುವುದು ಕಥೆಯ ಸಂದರ್ಭದಲ್ಲಿ ಮುಖ್ಯವೆನಿಸುತ್ತದೆ. ಈ ಮೇಲಿನ ವಿಚಾರಗಳ ಹಿನ್ನೆಲೆಯಲ್ಲಿ ಕಥೆಯನ್ನು ಅರ್ಥಯಿಸಬೇಕಾಗುತ್ತದೆ.

ಕಥೆಯ ಆರಂಭ ಹೀಗಿದೆ: ಮೊದಲೆಲ್ಲ ಆ ಮನೆಗೆ ಹೋಗುವುದೆಂದರೆ ರಾಮಾಯಣ. ಬಸ್ಸು ಇಳಿದ ಕೂಡಲೆಯೋ ಅಲ್ಲೇ ಆಸುಪಾಸಿನಲ್ಲೋ ಸಿಗದ ಮನೆಯದು. ಗದ್ದೆ, ತೋಡು, ತೊಡಮೆ, ತೋಟ ದಾಟಿ ಮರದ ಬೇರಿನ ಮೆಟ್ಟಿಲು, ಗುಡ್ಡದ ಏರುತಗ್ಗುಗಳನ್ನು ಹತ್ತಿ ಇಳಿದು ಹಾರಿ ಗಡಗಡ ನಡುಗುವ ಸಂಕದ ಮೇಲೆ ಅದರಂತೆಯೇ ನಡುಗುತ್ತ ಆಚೆದಾಟಿ ಅಂತೂ ತಲಪುವುದರೊಳಗೆ ಜೀವ ಅಡಿಮೇಲಾಗುತ್ತಿತ್ತು. ಈಗ ಹೊರಟಿದ್ದೇನೆ, ಎಷ್ಟೋ ಸಮಯದ ಮೇಲೆ; ಈಗ ಅಲ್ಲಿಗೆ ರಸ್ತೆ ಆಗಿದೆ'. ಅಲ್ಲಿ ರಸ್ತೆ ಆಗಿದೆ ಎನ್ನುವ ಕಾರಣಕ್ಕೆ ನಿರೂಪಕಿ ವಸಂತಿ ಕೂಡ ತನ್ನ ಹಳ್ಳಿಯ ಮನೆಗೆ ಹೊರಟಿದ್ದಾರೆ. ರಸ್ತೆ, ನಿರೂಪಕಿ ವಸಂತಿಯ ವ್ಯಕ್ತಿತ್ವದ ಮೇಲೂ ತನ್ನ ಪ್ರಭಾವವನ್ನು ಬೀರಿದೆ.

ಈ ಹಳ್ಳಿಯ ಮನೆಯಲ್ಲಿ ಬರುವ ಪಾತ್ರಗಳು ಹಲವು. ಒಂದು ಅವಿಭಕ್ತ ಕುಟುಂಬದ ಚಿತ್ರಣ ನಮಗೆ ಇಲ್ಲಿ ಸಿಗುತ್ತದೆ. ಅಲ್ಲಿನ ಸದಸ್ಯರೆಂದರೆ, ನಿರೂಪಕಿ ವಸಂತಿಯ ಮಾವಯ್ಯ, ಅವರ

ಮಕ್ಕಳಾದ ರಾಮಣ್ಣ, ವಾಸ್ತೇವ. ಮನೆಯಲ್ಲಿರುವ ಇನ್ನಿತರರು ಎಂದರೆ ರುಕ್ಮಿಣತ್ತೆ, ಸತ್ಯವತಿ, ಮೀನಾಕ್ಷಿ, ಮಂಜುಳಾ, ಸುಲೋಚನಾ, ಸುಗುಣ, ಕಮಲಾಕ್ಷಿ ಮತ್ತು ಕೆಲಸದವಳು ಮಂಜಿ. ಆ ಮನೆಗೆ ರಸ್ತೆ ಮಾಡಿಸಿದಾತ ವಾಸ್ತೇವ. ಈತ ರಸ್ತೆ ಮಾಡಿಸಲು ಕಾರಣವಿದೆ. ರುಕ್ಮಿಣತ್ತೆಯ ಹಿರಿ ಮಗಳು ಸುಗುಣಳಿಗೆ ಬಂದ ನೆಂಟಸ್ತಿಗೆ ತಪ್ಪಿಹೋಗಿದ್ದು ರಸ್ತೆ ಇಲ್ಲ ಎಂಬ ಕಾರಣಕ್ಕೆ. ಎರಡನೇ ಮಗಳು ಸತ್ಯವತಿಗೆ ರಸ್ತೆ ಇಲ್ಲ ಎಂಬ ನೆಪದಿಂದ ನೆಂಟಸ್ತಿಗೆ ತಪ್ಪಿಹೋಗುವುದರಲ್ಲಿದ್ದ ಸುಳಿವು ಸಿಕ್ಕಿದ್ದೇ ತಡ ವಾಸ್ತೇವ ರಸ್ತೆ ಮಾಡಿಸಿಯೇ ಬಿಡುತ್ತಾನೆ. ಕಮಲಾಕ್ಷತ್ತಿಗೆ ಹೇಳುವ ಕಾರಣವೆಂದರೆ 'ವಾಸ್ತೇವ ಮುಂದೆ ಮದುವೆಯಾದರೆ ಅವನ ಹೆಂಡ್ತಿ ಮನೆಯವರು ದೊಡ್ಡ ವ್ಯಕ್ತಿಗಳು ಬರುವುದಕ್ಕೆ'.

ರಸ್ತೆಯ ನಿರ್ಮಾಣದೊಂದಿಗೆ ಮನೆಯ ಪರಿಸರಕ್ಕೆ ಅಗತ್ಯವಾದ ಸೂಕ್ಷ್ಮತರ ಬದಲಾವಣೆಗಳು ಅಲ್ಲಿ ನಡೆಯುತ್ತವೆ. ವಾಸ್ತೇವನಿಗೊಂದು ಬೈಕ್ ಬಂತು. ಪಕ್ಕದ ಗದ್ದೆ ರಾಜಮ್ಮ ರಸ್ತೆಗೆ ಒಂದಿಂಚು ಜಾಗ ಕೊಡಲಾರೆ ಎಂದು ಕತ್ತಿ ಹಿಡಿದು ಹೆದರಿಸಿದವಳು ಈಗ ದಿನಕ್ಕೊಮ್ಮೆಯಾದರೂ ಆ ಮನೆಗೆ ಬರುವುದು ರೂಢಿಯಾಯಿತು. ಸತ್ಯವತಿಗೆ ಮದುವೆ ನಿಶ್ಚಯವಾಯಿತು. ಮನೆಯಲ್ಲಿ ಟಿ.ವಿ ಬಂತು. ಎಲ್ಲರೂ ಒಟ್ಟಿಗೆ ಕುಳಿತು ಸಿನೆಮಾ ನೋಡುವ ಕಾಲವೂ ಬಂತು. ರಾಮಣ್ಣನ ಪತ್ನಿ ಮೀನಾಕ್ಷಿಗೆ ಬೈಕ್‌ನಲ್ಲಿ ಕುಳಿತುಕೊಂಡು ತನ್ನ ತಾಯಿ ಮನೆಗೆ ಆಗಾಗ ಹೋಗಿಬರಲು ಸಲೀಸಾಯ್ತು. ಅಜ್ಜಯ್ಯನಿಗೆ ಅಸೌಖ್ಯವಾದಾಗ ನಿಮಿಷದಲ್ಲಿ ಡಾಕ್ಟರನ್ನು ಕರೆದುಕೊಂಡು ಬಂದು ಮದ್ದು ಮಾಡಲು ಸಾಧ್ಯವಾಯಿತು. ಗಮನಾರ್ಹ ಬದಲಾವಣೆಯೆಂದರೆ ಮನೆಯ ಸ್ತ್ರೀಯರಿಗೆ ದನದ ಹಾಲನ್ನು ಪೇಟೆಗೆ ಕೊಂಡೊಯ್ದು ಮಾರಾಟ ಮಾಡುವುದರ ಮೂಲಕ ಆರ್ಥಿಕವಾಗಿ ಸ್ವಲ್ಪ ಹಣ ಸಂಪಾದನೆ ಸಾಧ್ಯವಾದುದು. ಇದಕ್ಕಿಂತ ದೊಡ್ಡ ಬದಲಾವಣೆಯೆಂದರೆ ರಸ್ತೆ ಅಜ್ಜಯ್ಯನ ಮನೆಯನ್ನು ಪೇಟೆಗೆ ಜೋಡಿಸಿದ್ದು.

ಆ ಮನೆಯಲ್ಲಿ ಆದ ಬದಲಾವಣೆಗೆ ತಮ್ಮನ್ನು ಒಪ್ಪಿಸಿಕೊಂಡ ಪಾತ್ರಗಳು ಹಲವರಾದರೆ, ಅದರಿಂದ ನೊಂದ ಪಾತ್ರಗಳು ಕೆಲವಿವೆ. ಆಧುನಿಕತೆಗೆ ತೆರೆದುಕೊಳ್ಳದ ಮಾವಯ್ಯ(ಅಭಿವೃದ್ಧಿಯನ್ನು ಅರಗಿಸಿಕೊಳ್ಳಲು ಸಾಧ್ಯವಾಗದ ಇವರಿಗೆ ಅಸೌಖ್ಯ ಹೆಚ್ಚಾದದ್ದೇ ರಸ್ತೆ ಆದ ಮೇಲೆ), ನಿರೂಪಕಿ ವಸಂತಿ, ಮಂಜಿ ಇವರಿಗೆಲ್ಲ ಏನೋ ಕಳೆದುಕೊಂಡ ಭಾವ ವ್ಯಕ್ತವಾಗುತ್ತದೆ. ಇವರ ಮನಸ್ಸಿನಲ್ಲಿ ಸಂಪ್ರದಾಯವನ್ನು ಬಿಡಲಾರದೆ ಆಧುನಿಕತೆಯನ್ನು ಒಪ್ಪಿಕೊಳ್ಳಲು ಸಾಧ್ಯವಾಗದೆ ದ್ವಂದ್ವ ಮನಸ್ಥಿತಿ ಕಾಡುತ್ತದೆ. ಮನೆಯ ಎದುರಿನ ಹಲಸಿನ ಮರ ಕಾಣುತ್ತಿಲ್ಲ ಎಂಬ ವಸಂತಿಯ ಪ್ರಶ್ನೆಗೆ ಮಂಜಿಯ ಉತ್ತರ 'ಒಂದು ಬೇಕಾದರೆ ಇನ್ನೊಂದು ಹೋಗಲೇಬೇಕು'. ಕಥೆಯಲ್ಲಿ ಇನ್ನೊಂದು ಕಡೆ ಮಂಜಿ ಹೇಳುವ ಮಾತು 'ಆ ಹಲ್ಸಿನ ಮರ ಕಡ್ದ್ರಲೆ! ಇನ್ನ್ ನಿಮ್ಮ ಮಾವಯ್ಯೊ ಹೆಚ್ಚ್ ದಿವ್ಸ ಇರತ್ತಿಲ್ಲೆ. ಅದೆಲ್ಲ ಹಾಂಗೆ. ದ್ವೊಡ್ ಜೀವೋ ದ್ವೊಡ್ ಮರ ಎಲ್ಲ ಕಡಿಕಡೀಗೆ ವಂದೆ ಆತೊ. ವಂದ್ ಹ್ವಾರೆ ಇನ್ನೊಂದ್ ಹ್ವಾಪ್ದೇ" ಈ ಮಾತುಗಳು ಪಲ್ಲಟಗೊಂಡ ಜೀವನದ ಸಂಕೀರ್ಣತೆಯನ್ನು ತೆರೆದಿಡುವುದಲ್ಲದೆ ಮಂಜಿಯಂತಹ ಸಾಮಾನ್ಯ ಬಡ ಸ್ತ್ರೀಯೊಬ್ಬಳು ತಾನು ಕಂಡಂತಹ ಬದುಕಿನ ಸೂಕ್ಷ್ಮತೆಯನ್ನು ಇತರರಾರು ಅರ್ಥಮಾಡಿಕೊಳ್ಳದ ವಿಷಾದತೆಯಲ್ಲಿ ತೆರೆದುಕೊಳ್ಳುತ್ತದೆ. ದೊಡ್ಡ ಜೀವ, ದೊಡ್ಡ ಮರಗಳು ಪರಂಪರೆಯ ಸೂಚನೆಗಳಾಗಿ ಬಂದು ಪರಂಪರೆ ನಾಶವಾಗುತ್ತಿರುವ ವಿಷಾದತೆಯೂ ಕಾಣಿಸಿಕೊಳ್ಳುತ್ತದೆ. ಪಲ್ಲಟಗೊಂಡ ಬದುಕಿನ ಸಂಕೀರ್ಣತೆಯು ಸರಳ ಸಮೀಕರಣಕ್ಕೆ ಒದಗುವಂತದ್ದಲ್ಲ ಎನ್ನುವ ನಿಲುವನ್ನು ಕಥೆ ಕಟ್ಟಿಕೊಡುತ್ತದೆ.

ಮೇಲಿನ ಎಲ್ಲಾ ಸನ್ನಿವೇಶ, ಘಟನೆಗಳ ಒಟ್ಟಿನ ಪರಿಣಾಮವೋ ಎನ್ನುವಂತೆ ಕಥೆ ಅಂತ್ಯವಾಗುವುದು ಹೇಗೆ ಅಂದರೆ ಹೋಟೆಲಿಗೆ ಹಾಲು ಕೊಂಡು ಹೋದ ರಾಮಣ್ಣ ತಿರುಗಿ ಬಂದುದು ಒಂದು ಲಾರಿ ಸಮೇತನಾಗಿ. ಬಂದವನೇ ಜನರಿಬ್ಬರ ಸಹಾಯದಿಂದ ಎರಡು ಮೂಟೆ ಅಡಿಕೆ ಎತ್ತಿ ಲಾರಿಗೆ ಹಾಕಿಸಿ, ತಾನೂ ಹತ್ತಿ ಅದರೊಡನೆ ಹೊರಟುಹೋಗುತ್ತಾನೆ. ಈ ಘಟನೆಯನ್ನು ಎಲ್ಲರೂ ಮೂಕವಿಸ್ಮಿತರಾಗಿ ನೋಡುತ್ತಿರಲು, ರುಕ್ಮಿಣಿಯತ್ತೆ ಅಡಿಕೆ ಮೂಟೆ ಹೋದದ್ದಕ್ಕೆ ಮರುಗುತ್ತಿರಲು ಮಾವಯ್ಯನ ಮಾತು 'ಹೋಯ್ತು. ಅಡಿಕೆ ಚೀಲ ತಕಂಡ್ ಹೋದ್ನ? ಚೀಲ ಖರ್ಚಾಪಲ್ಲಿವರೆಗೆ ಹೊರ್‍ವ. ಕಡೆಗೆ ಏನ್ಮಾಡ್ತ ಅಂಬ್ರ್? ನೀನೀಗ ಮರ್‍ಕುದೇಕೆ? ಮರ್‍ಕಿರ್ ಅದೆಲ್ಲ ವಾಪಸ್ ಬತ್ತ?. ಎನ್ನುತ್ತಾರೆ. ಇಲ್ಲಿಯ ಮುಖ್ಯ ಪ್ರಶ್ನೆಯಾಗಿ ಕಾಡುವಂತದ್ದು 'ಕಳೆದುಕೊಂಡಾದ ಮೇಲೆ ಮರುಗಿದರೆ ಅದೆಲ್ಲ ವಾಪಾಸು ಬರುತ್ತದಾ ಎಂದು. ಇದನ್ನೇ ಜಾಗತೀಕರಣ ಪ್ರಕ್ರಿಯೆಗೆ ಅನ್ವಯಿಸುವುದಾದರೆ ನಾವು ಇಂದು ಏನೇನನ್ನೋ ಕಳೆದುಕೊಳ್ಳುತ್ತಿದ್ದೇವೆ. ಏನೋ ಮಾಡಲು ಹೊರಟು ಇನ್ನೇನೋ ಆಗುತ್ತಿದ್ದೇವೆ. ಇದು ಕಥೆಯಲ್ಲಿ ಮಾತ್ರ ಕಾಡುವ ಪ್ರಶ್ನೆಯಾಗಿ ಉಳಿಯದೆ ಅದರಾಚೆಗೂ ದಾಟಿ ಬಿಡುತ್ತದೆ. ವೈದೇಹಿಯವರ ಕಥೆ 'ಮನೆಯವರೆಗಿನ ಹಾದಿ'ಯ ಕಥನ ಕ್ರಮವು ಕೊನೆಗೆ ಈ ಚಿಂತನೆಯ ಕಡೆಗೆ ನಮ್ಮನ್ನು ತಂದು ಮುಟ್ಟಿಸುತ್ತದೆ. ಇಲ್ಲಿ ರಸ್ತೆಯನ್ನು ರೂಪಕವಾಗಿ ಬಳಸಿಕೊಂಡು ಆಧುನಿಕತೆ ಒಂದು ಪ್ರಾದೇಶಿಕ ಸಂಸ್ಕೃತಿಯೊಳಗೆ ನಿಧಾನವಾಗಿ ಪ್ರವೇಶ ಪಡೆಯುತ್ತಿರುವ ಚಿತ್ರಣವನ್ನು ವೈದೇಹಿಯವರು ಕಟ್ಟಿಕೊಡುವುದರ ಜೊತೆಗೆ ಅದರಿಂದಾಗುತ್ತಿರುವ ಒಳಿತು ಕೆಡುಕುಗಳ ಪರಿಣಾಮಗಳನ್ನು ಬಿಚ್ಚಿಡುತ್ತಿದ್ದಾರೆ. ಜಾಗತೀಕರಣ ಪ್ರಕ್ರಿಯೆಯಲ್ಲಿ ಒಳಿತಿನಷ್ಟೇ ಕೆಡುಕು ಇದೆ. ಕೆಡುಕಿನ ಅರಿವು ಜನಸಾಮಾನ್ಯರಿಗೆ ಆಗುವಷ್ಟರಲ್ಲಿ ಕಾಲ ಮಿಂಚಿ ಹೋಗಿರುತ್ತದೆ.

ಒಟ್ಟಿನಲ್ಲಿ ಮೇಲಿನ ಎರಡು ಕಥೆಗಳು, ಆಧುನಿಕತೆಯ ಪರಿಣಾಮವಾಗಿ ಹೊರಗಿನ ವಸ್ತುವೊಂದು ಪ್ರಾದೇಶಿಕ ಸಂಸ್ಕೃತಿಯ ಒಳಗೆ ಪ್ರವೇಶ ಪಡೆದಾಗ ಒಂದು ಕುಟುಂಬದಲ್ಲಿ, ಸಮಾಜದಲ್ಲಿ ನಡೆಯುವ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಸ್ತ್ರೀ ದೃಷ್ಟಿಕೋನದ ಮೂಲಕ ದಾಖಲಿಸುವ ಕೆಲಸ ಮಾಡಿದೆ.

## ಗ್ರಂಥ ಋಣ


೧. ಅಲೆಗಳಲ್ಲಿ ಅಂತರಂಗ – ವೈದೇಹಿ, ಅಕ್ಷರ ಪ್ರಕಾಶನ, ಸಾಗರ, ೨೦೦೬

೨. ವೈದೇಹಿ ಕಥನ –ಟಿ.ಪಿ.ಅಶೋಕ, ಅಕ್ಷರ ಪ್ರಕಾಶನ, ಸಾಗರ, ೨೦೧೩

೩. ವೈದೇಹಿ ವಾಚಿಕೆ – ಟಿ.ಪಿ.ಅಶೋಕ, ನುಡಿ ಪುಸ್ತಕ, ಬೆಂಗಳೂರು, ೨೦೦೯

೪. ವಿಜಯಾನ್ವೇಷಣ – ಶಶಿಕಲಾ ಎಸ್.ಡಿ(ಸಂ), ವಿಜಯಾ ದಬ್ಬೆ ಅಭಿನಂದನಾ ಗ್ರಂಥ ಸಮಿತಿ, ಮೈಸೂರು, ೨೦೦೪.